R. B.

# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ | : | 100 (79) |
| ಸದಸ್ಯರ ಹೆಸರು | : | ಶ್ರೀ ರಘು ಆರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 17.08.2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಅಳವಡಿಸಿಕೊಂಡಿರುವ ಮಾನದಂಡಗಳು/ಮಾರ್ಗಸೂಚಿಗಳೇನು: (ಮಾಹಿತಿ ನೀಡುವುದು) | ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್)ಗಳನ್ನು ಪ್ರಾರಂಭಿಸಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ;<br>• ಗ್ರಾಮಾಂತರ ಪ್ರದೇಶಗಳಲ್ಲಿ 1 ಎಕರೆ ಅಥವಾ ಅದಕ್ಕಿಂತ ಹೆಚ್ಚು ನಿವೇಶನ/ಜಮೀನು ಹೊಂದಿರುವ ಸರ್ಕಾರಿ ಶಾಲೆ, ನಗರ ಪ್ರದೇಶಗಳಲ್ಲಿ ಅರ್ಧ ಎಕರೆ ಅಥವಾ ಅದಕ್ಕಿಂತ ಹೆಚ್ಚು ನಿವೇಶನ/ಜಮೀನು ಹೊಂದಿರುವ ಸರ್ಕಾರಿ ಶಾಲೆ.<br>• ಶಾಲಾ ನಿವೇಶನ/ಜಮೀನು ಸರ್ಕಾರದ ಹೆಸರಿನಲ್ಲಿ ಹೊಂದಿದ್ದು, ಯಾವುದೇ ವ್ಯಾಜ್ಯಗಳಿಲ್ಲದೇ ಇರುವ ಶಾಲೆ.<br>• ಹೆಚ್ಚು ದಾಖಲಾತಿ ಹೊಂದಿದ್ದು, ಪೂರ್ವ ಪ್ರಾಥಮಿಕದಿಂದ 12 ನೇ ತರಗತಿಯವರೆಗೆ ಕನಿಷ್ಠ 1200 ವಿದ್ಯಾರ್ಥಿಗಳಿಗೆ ಮೂಲಸೌಕರ್ಯಗಳನ್ನು ಒದಗಿಸಿ, ಉನ್ನತೀಕರಿಸಲು ಅವಕಾಶವಿರುವಂತಹ ಶಾಲೆ.<br>• ಪ್ರತಿ ಗ್ರಾಮ ಪಂಚಾಯಿತಿಗೆ ಕನಿಷ್ಠ ಒಂದು ಶಾಲೆಯನ್ನು ಆಯ್ಕೆ ಮಾಡಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಿಸಲು ಕ್ರಮವಹಿಸಲಾಗುತ್ತಿದೆ. |
| ಆ) | ಇದುವರೆಗೂ ಎಷ್ಟು ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆಯಲಾಗಿದೆ: (ಜಿಲ್ಲಾವಾರು ಮಾಹಿತಿ ನೀಡುವುದು) | ಇದುವರೆಗೂ ವಿವಿಧ ಯೋಜನೆಗಳಡಿ ಸರ್ಕಾರಿ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಿಸುತ್ತಿರುವ ಶಾಲೆಗಳ ವಿವರ ಈ |

<table>
<tr><td></td><td></td><td>ಕೆಳಗಿನಂತಿದೆ.

| ಕ್ರ.ಸಂ. | ಯೋಜನೆ/ವಿವರ | ಕೆ.ಪಿ.ಎಸ್. ಶಾಲೆಗಳ ಸಂಖ್ಯೆ |
|---|---|---|
| 1 | 2018 ರಿಂದ ಈವರೆವಿಗೂ ಪ್ರಾರಂಭಿಸಲಾಗಿರುವ ಕೆ.ಪಿ.ಎಸ್. ಶಾಲೆಗಳು | 326 |
| 2 | ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಸಾಲ ಯೋಜನೆಯಡಿ ಉನ್ನತೀಕರಿಸಲಾಗುತ್ತಿರುವ ಕೆಪಿಎಸ್ ಶಾಲೆಗಳು (ಅನುಮೋದನೆ-500) | 496 |
| 3 | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನದಲ್ಲಿ ಉನ್ನತೀಕರಿಸಲಾಗುತ್ತಿರುವ ಕೆಪಿಎಸ್ ಶಾಲೆಗಳು (ಅನುಮೋದನೆ-200) | 179 |
| 4 | ಪಿ.ಎಂ ಶ್ರೀ ಕೆಪಿಎಸ್ ಶಾಲೆಗಳು (590 ಶಾಲೆಗಳಲ್ಲಿ ಪುನರಾವರ್ತನೆಗೊಂಡಿರುವ 22 ಶಾಲೆಗಳನ್ನು ಹೊರಡುಪಡಿಸಿ) | 568 |
| 5 | ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಕೆಪಿಎಸ್ ಶಾಲೆಗಳನ್ನಾಗಿ ಉನ್ನತೀಕರಿಸಲಾಗುತ್ತಿರುವ ಉರ್ದು ಮಾಧ್ಯಮದ ಶಾಲೆಗಳು | 103 |
| | **ಒಟ್ಟು** | **1672** |

ಜಿಲ್ಲಾವಾರು ಕೆಪಿಎಸ್. ಶಾಲೆಗಳ ಮಾಹಿತಿಯನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ.</td></tr>
<tr><td>ಇ)</td><td>ಸದರಿ ಪಬ್ಲಿಕ್ ಶಾಲೆಗಳಿಗೆ</td><td>ಕೆ.ಪಿ.ಎಸ್ ಶಾಲೆಗಳಿಗೆ ಮೂಲಭೂತ</td></tr>
</table>

| | | |
|---|---|---|
| | ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ? (ಜಿಲ್ಲಾವಾರು ಮಾಹಿತಿ ನೀಡುವುದು) | ಸೌಲಭ್ಯಗಳನ್ನು ಒದಗಿಸಲಾಗಿರುವ ವಿವರ ಈ ಕೆಳಗಿನಂತಿದೆ.<br><br>1. 2018-19 ರಿಂದ ಈವರೆವಿಗೆ ಪ್ರಾರಂಭಿಸಲಾಗಿರುವ 326 ಶಾಲೆಗಳಲ್ಲಿ 04 ಶಾಲೆಗಳನ್ನು ಸಿ.ಎಸ್.ಆರ್. ಅಡಿ ಅಭಿವೃದ್ಧಿಗೊಳಿಸಲಾಗಿದ್ದು, ಉಳಿದ 322 ಕೆ.ಪಿ.ಎಸ್ ಶಾಲೆಗಳಿಗೆ 2018 ರಿಂದ 2025-26ರವರೆಗೆ ಮೂಲಸೌಕರ್ಯಗಳನ್ನು ಒದಗಿಸಲು ನೀಡಲಾದ ಅನುದಾನದ ವಿವರವನ್ನು **ಅನುಬಂಧ-2** ರಲ್ಲಿ ಸಲ್ಲಿಸಿದೆ. 2026-27 ನೇ ಸಾಲಿನಲ್ಲಿ 326 ಕೆಪಿಎಸ್ ಶಾಲೆಗಳಿಗೆ ಮೂಲಸೌಕರ್ಯ ಒದಗಿಸಲು ರೂ.2000.00 ಲಕ್ಷಗಳನ್ನು ಒದಗಿಸಲಾಗಿದ್ದು, ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳ ಹಾಜರಾತಿಗೆ ಅನುಗುಣವಾಗಿ ಹಾಗೂ ಅವಶ್ಯವಿರುವ ಮೂಲಸೌಲಭ್ಯಗಳ ಬಗ್ಗೆ ಸಂಬಂಧಪಟ್ಟ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಆಧರಿಸಿ ಅರ್ಹತೆ ಮತ್ತು ಆದ್ಯತೆಯಂತೆ ಕ್ರಿಯಾಯೋಜನೆಯನ್ನು ರೂಪಿಸಿ, ಅನುದಾನದ ಲಭ್ಯತೆಗೆ ಅನುಗುಣವಾಗಿ ಅನುಮೋದನೆ ನೀಡಿ ಮೂಲಸೌಲಭ್ಯಗಳನ್ನು ಒದಗಿಸಿ ಕೊರತೆಯನ್ನು ನೀಗಿಸಲು ಕ್ರಮ ವಹಿಸಲಾಗುತ್ತಿದೆ.<br>2. ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಸಾಲ ಯೋಜನೆಯಡಿ ಉನ್ನತೀಕರಿಸಲಾಗುತ್ತಿರುವ 500 ಕೆ.ಪಿ.ಎಸ್ ಶಾಲೆಗಳಲ್ಲಿ ಕನಿಷ್ಟ 1200 ವಿದ್ಯಾರ್ಥಿಗಳ ವ್ಯಾಸಂಗಕ್ಕಾಗಿ ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದ್ದು, ಅದನ್ನು ಆಧರಿಸಿ ಹಂತಹಂತವಾಗಿ ಮೂಲಸೌಕರ್ಯಗಳನ್ನು ಪ್ರತಿ ಶಾಲೆಗೆ ರೂ.2.00 ರಿಂದ 4.00 ಕೋಟಿಗಳಲ್ಲಿ ಉನ್ನತೀಕರಿಸಲಾಗುವುದು. 2026-27 ನೇ ಸಾಲಿಗೆ ಸದರಿ ಕೆ.ಪಿ.ಎಸ್ ಶಾಲೆಗಳಿಗೆ ಮೂಲಸೌಕರ್ಯ ಒದಗಿಸಲು ರೂ.10000.00 ಲಕ್ಷಗಳನ್ನು ಒದಗಿಸಲಾಗಿದೆ. |

| | | |
|---|---|---|
| | | 3. ಕೆ.ಕೆ.ಆರ್.ಡಿ.ಬಿ. ಯೋಜನೆಯಡಿ ಉನ್ನತೀಕರಿಸಲಾಗುತ್ತಿರುವ 200 ಕೆಪಿಎಸ್ ಶಾಲೆಗಳಲ್ಲಿ ಕನಿಷ್ಟ 1200 ವಿದ್ಯಾರ್ಥಿಗಳ ವ್ಯಾಸಂಗಕ್ಕಾಗಿ ಮೂಲಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದ್ದು, ಅದನ್ನು ಆಧರಿಸಿ ಹಂತಹಂತವಾಗಿ ಮೂಲಸೌಕರ್ಯಗಳನ್ನು ಪ್ರತಿ ಶಾಲೆಗೆ ರೂ.2.00 ರಿಂದ 4.00 ಕೋಟಿಗಳಲ್ಲಿ ಕೆ.ಕೆ.ಆರ್.ಡಿ.ಬಿ. ಅನುದಾನದಡಿ ಉನ್ನತೀಕರಿಸಲಾಗುವುದು.<br>4. ಪಿ.ಎಂ ಶ್ರೀ ಕೆ.ಪಿ.ಎಸ್ ಶಾಲೆಗಳಿಗೆ (ಅನುಮೋದಿತ 590 ಶಾಲೆಗಳು) ಕೇಂದ್ರ ಸರ್ಕಾರದ ಪಿ.ಎಂ ಶ್ರೀ ಯೋಜನೆಯಡಿ ಮೂಲಸೌಕರ್ಯ ಮತ್ತು ಕಲಿಕಾ ಸೌಕರ್ಯಗಳ ಅಭಿವೃದ್ಧಿಗೆ 2026-27 ನೇ ಸಾಲಿಗೆ ರೂ.16430.2097 ಲಕ್ಷಗಳು ಅನುಮೋದನೆಯಾಗಿರುತ್ತದೆ. ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳ ಹಾಜರಾತಿಗೆ ಅನುಗುಣವಾಗಿ ಹಾಗೂ ಅವಶ್ಯವಿರುವ ಮೂಲಸೌಲಭ್ಯಗಳ ಬಗ್ಗೆ ಸಂಬಂಧಪಟ್ಟ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಆಧರಿಸಿ ಅರ್ಹತೆ ಮತ್ತು ಆದ್ಯತೆಯಂತೆ ಕ್ರಿಯಾಯೋಜನೆಯನ್ನು ರೂಪಿಸಿ, ಅನುದಾನದ ಲಭ್ಯತೆಗೆ ಅನುಗುಣವಾಗಿ ಅನುಮೋದನೆ ನೀಡಿ ಮೂಲಸೌಲಭ್ಯಗಳನ್ನು ಒದಗಿಸಿ ಕೊರತೆಯನ್ನು ನೀಗಿಸಲು ಕ್ರಮ ವಹಿಸಲಾಗುತ್ತಿದೆ.<br>5. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಉನ್ನತೀಕರಿಸಲಾಗುತ್ತಿರುವ 103 ಕೆ.ಪಿ.ಎಸ್ ಶಾಲೆಗಳಲ್ಲಿ ಕನಿಷ್ಟ 1200 ವಿದ್ಯಾರ್ಥಿಗಳಿಗೆ ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಲು ಅಗತ್ಯ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಿಂದ ಕ್ರಮವಹಿಸಲಾಗುತ್ತಿದೆ.<br><br>ಪ್ರತೀ ವರ್ಷ ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ |

| | | |
|---|---|---|
| | | ಮತ್ತು ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳ ಹಾಜರಾತಿಗೆ ಅನುಗುಣವಾಗಿ ಹಾಗೂ ಅವಶ್ಯವಿರುವ ಮೂಲಸೌಲಭ್ಯಗಳ ಬಗ್ಗೆ ಸಂಬಂಧಪಟ್ಟ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಆಧರಿಸಿ ಅರ್ಹತೆ ಮತ್ತು ಆದ್ಯತೆಯಂತೆ ಕ್ರಿಯಾಯೋಜನೆಯನ್ನು ರೂಪಿಸಿ, ಅನುದಾನದ ಲಭ್ಯತೆಗೆ ಅನುಗುಣವಾಗಿ ಅನುಮೋದನೆ ನೀಡಿ ಮೂಲಸೌಲಭ್ಯಗಳನ್ನು ಒದಗಿಸಿ ಕೊರತೆಯನ್ನು ನೀಗಿಸಲು ಕ್ರಮ ವಹಿಸಲಾಗುತ್ತಿದೆ.<br>(ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ). |

ಸಂಖ್ಯೆ: ಇಪಿ 227 ಯೋಸಕ 2026

**(ಎಸ್.ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಅನುಬಂಧ-1

## ಕೆಪಿಎಸ್ ಶಾಲೆಗಳ ಮಾಹಿತಿ

| ಕ್ರ.ಸಂ | ಜಿಲ್ಲೆಯ ಹೆಸರು | 2018 ರಿಂದ ಈವರೆಗೂ ಪ್ರಾರಂಭಿಸಲಾಗಿರುವ ಕೆಪಿಎಸ್ ಶಾಲೆಗಳು | ಎಡಿಬಿ ಸಾಲ ಯೋಜನೆಯಡಿ ಉನ್ನತೀಕರಿಸಲಾಗುತ್ತಿರುವ ಕೆಪಿಎಸ್ ಶಾಲೆಗಳು(ಅನುಮೋದನೆ 500) | ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನದಲ್ಲಿ ಉನ್ನತೀಕರಿಸಲಾಗುತ್ತಿರುವ ಕೆಪಿಎಸ್ ಶಾಲೆಗಳು (ಅನುಮೋದನೆ 200) | ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಕೆಪಿಎಸ್ ಶಾಲೆಗಳನ್ನಾಗಿ ಉನ್ನತೀಕರಿಸಲಾಗುತ್ತಿರುವ ಉರ್ದು ಮಾಧ್ಯಮದ ಶಾಲೆಗಳು | ಪಿಎಂ ಶ್ರೀ ಕೆಪಿಎಸ್ ಶಾಲೆಗಳು (590 ಶಾಲೆಗಳಲ್ಲಿ ಪುನರಾವರ್ತನೆಗೊಂಡಿರುವ 27 ಶಾಲೆಗಳನ್ನು ಹೊರತುಪಡಿಸಿ) |
|---|---|---|---|---|---|---|
| 1 | BAGALKOT | 8 | 23 | | 8 | 32 |
| 2 | BALLARI | 6 | | 12 | 1 | 19 |
| 3 | BANGALORE NORTH | 18 | | | 3 | 5 |
| 4 | BANGALORE RURAL | 4 | 3 | | | 8 |
| 5 | BELGAUM | 9 | 25 | | 7 | 15 |
| 6 | BENGALURU CENTRAL | 24 | | | 4 | 8 |
| 7 | BIDAR | 9 | 14 | 29 | 2 | 13 |
| 8 | CHAMARAJANAGARA | 4 | 12 | | 1 | 13 |
| 9 | CHIKKABALLAPUR | 6 | 14 | | | 16 |
| 10 | CHIKKAMAGALUR | 8 | 15 | | | 12 |
| 11 | CHIKKODI | 10 | 25 | | 9 | 39 |
| 12 | CHITRADURGA | 8 | | | | 15 |
| 13 | DAKSHINA KANNADA | 9 | 20 | | | 19 |
| 14 | DAVANAGERE | 10 | 23 | | 4 | 12 |
| 15 | DHARWAD | 9 | 20 | | 20 | 18 |
| 16 | GADAG | 9 | 11 | | 1 | 21 |
| 17 | HASSAN | 15 | 19 | | | 17 |
| 18 | HAVERI | 7 | 22 | | 19 | 23 |
| 19 | KALABURAGI | 14 | 24 | 49 | 4 | 24 |
| 20 | KODAGU | 3 | 6 | | | 7 |
| 21 | KOLAR | 7 | 17 | | 2 | 12 |
| 22 | KOPPAL | 9 | 14 | 24 | 1 | 20 |
| 23 | MADHUGIRI | 7 | 14 | | | 9 |
| 24 | MANDYA | 9 | 22 | | | 11 |
| 25 | MYSURU | 13 | 30 | | | 20 |
| 26 | RAICHUR | 10 | 22 | 30 | 1 | 23 |
| 27 | BENGALURU DAKSHINA | 11 | 13 | | 2 | 11 |
| 28 | SHIVAMOGGA | 11 | 24 | | 2 | 13 |
| 29 | SIRSI U.K | 5 | 10 | | 1 | 15 |
| 30 | TUMKUR | 11 | | | 2 | 10 |
| 31 | UDUPI | 9 | 12 | | | 13 |
| 32 | UTTARA KANNADA | 8 | 7 | | | 8 |
| 33 | VIJAYPUR | 14 | 24 | | 7 | 34 |
| 34 | YADAGIRI | 6 | 11 | 23 | 1 | 19 |
| 35 | VIJAYANAGARA | 6 | | 12 | 1 | 14 |
| | **Total** | **326** | **496** | **179** | **103** | **568** |

ಹಿರಿಯ ಸಹಾಯಕ ನಿರ್ದೇಶಕರು
ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳು
ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು.

ಅನುಬಂಧ-2

## ಜಿಲ್ಲಾವಾರು ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ 2018-19 ರಿಂದ 2025-26 ರವರೆಗೆ ಮೂಲಭೂತ ಸೌಕರ್ಯಗಳಿಗಾಗಿ ಬಿಡುಗಡೆಯಾದ ಅನುದಾನ

**(ಎಸ್.ಎಸ್.ಕೆ ಹಾಗೂ ಆಯುಕ್ತಾಲಯದ ಯೋಜನಾ ಶಾಖೆಯ ಮಾಹಿತಿಯಂತೆ)**

| ಕ್ರ.ಸಂ | ಜಿಲ್ಲೆಯ ಹೆಸರು | 2018 ರಿಂದ ಈವರೆಗೂ ಪ್ರಾರಂಭಿಸಲಾಗಿರುವ ಕೆಪಿಎಸ್ ಶಾಲೆಗಳು | ಒಟ್ಟು ಮೊತ್ತ (ರೂ.ಲಕ್ಷ ಗಳಲ್ಲಿ) |
|---|---|---|---|
| 1 | BAGALKOT | 8 | 1437.32 |
| 2 | BALLARI | 6 | 1288.72 |
| 3 | BANGALORE NORTH | 18 | 4417.66 |
| 4 | BANGALORE RURAL | 4 | 757.99 |
| 5 | BELGAUM | 9 | 1490.65 |
| 6 | BENGALURU CENTRAL | 24 | 5137.89 |
| 7 | BIDAR | 9 | 1197.45 |
| 8 | CHAMARAJANAGARA | 4 | 1013.34 |
| 9 | CHIKKABALLAPUR | 6 | 982.74 |
| 10 | CHIKKAMAGALUR | 8 | 993.38 |
| 11 | CHIKKODI | 10 | 1661.33 |
| 12 | CHITRADURGA | 8 | 1182.75 |
| 13 | DAKSHINA KANNADA | 9 | 1831.03 |
| 14 | DAVANAGERE | 10 | 1873.76 |
| 15 | DHARWAD | 9 | 1617.36 |
| 16 | GADAG | 9 | 1506.67 |
| 17 | HASSAN | 15 | 1604.24 |
| 18 | HAVERI | 7 | 1036.75 |
| 19 | KALABURAGI | 14 | 2154.99 |
| 20 | KODAGU | 3 | 711.64 |
| 21 | KOLAR | 7 | 1199.58 |
| 22 | KOPPAL | 9 | 2192.63 |
| 23 | MADHUGIRI | 7 | 802.99 |
| 24 | MANDYA | 9 | 1146.14 |
| 25 | MYSURU | 13 | 2093.13 |
| 26 | RAICHUR | 10 | 2318.71 |
| 27 | RAMANAGARA | 7 | 887.35 |
| 28 | SHIVAMOGGA | 11 | 1903.79 |
| 29 | SIRSI DK | 5 | 814.84 |
| 30 | TUMKUR | 11 | 2137.80 |
| 31 | UDUPI | 9 | 1474.19 |
| 32 | UTTARA KANNADA | 8 | 1512.94 |
| 33 | VIJAYPUR | 14 | 3377.41 |
| 34 | YADAGIRI | 6 | 1692.62 |
| 35 | VIJAYANAGARA | 6 | 1515.89 |
| | ಒಟ್ಟು | 322 | 58966.06 |

R Wayak
15/6/26

ಹಿರಿಯ ಸಹಾಯಕ ನಿರ್ದೇಶಕರು
ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳು
ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾ
ಬೆಂಗಳೂರು.